ಕರ್ನಾಟಕ ಸರಕಾರ
ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080-22028032/34/
ಫ್ಯಾಕ್ಸ್ 22028041

ದಿನಾಂಕ: 22-1-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ನೇತಾಜಿ ಸುಭಾಷ್ ಚಂದ್ರ ಭೋಸ್ 118 ನೇ ಜನ್ಮದಿನಾಚರಣೆ ಅಂಗವಾಗಿ ಅವರ ಪ್ರತಿಮೆ ಬಳಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ:<br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ | 23-1-2015<br>ಶುಕ್ರವಾರ<br>ಬೆಳಗ್ಗೆ<br>10-00 ಗಂಟೆಗೆ | ವಿಧಾನ ಸೌಧದ ಪಶ್ಚಿಮ ದಿಕ್ಕಿನಲ್ಲಿರುವ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಪ್ರತಿಮೆ ಬಳಿ<br>ಬೆಂಗಳೂರು |
| 2 | ಬೆಂಗಳೂರು ಡೈರಿ ಸಂಸ್ಥಾಪನಾ ದಿನಾಚರಣೆ ಮತ್ತು ಸುವರ್ಣ ಸಂವತ್ಸರ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭ<br>ಉದ್ಘಾಟನೆ:<br>ಶ್ರೀ ಟಿ.ಬಿ. ಜಯಚಂದ್ರ,<br>ಕಾನೂನು ಹಾಗೂ ಪಶು ಸಂಗೋಪನಾ ಸಚಿವರು<br><br>ತಮಿಳುನಾಡು ರಾಜ್ಯದಲ್ಲಿ ನಂದಿನಿ ಹಾಲು ಮಾರಾಟಕ್ಕೆ ಚಾಲನೆ:<br>ಶ್ರೀ ಹೆಚ್.ಎಸ್. ಮಹದೇವಪ್ರಸಾದ್,<br>ಸಹಕಾರ ಹಾಗೂ ಸಕ್ಕರೆ ಸಚಿವರು<br>ಅಧ್ಯಕ್ಷತೆ:<br>ಶ್ರೀ ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು | 23-1-2015<br>ಶುಕ್ರವಾರ<br>ಬೆಳಗ್ಗೆ<br>10-00 ಗಂಟೆಗೆ | ಬೆಂಗಳೂರು ಡೈರಿ ಆವರಣ<br>ಡಾ: ಎಂ.ಹೆಚ್. ಮರಿಗೌಡ ರಸ್ತೆ,<br>ಬೆಂಗಳೂರು -560 029 |
| 3 | ಪತ್ರಿಕಾಗೋಷ್ಠಿ:<br>ಶ್ರೀ ಕೆ. ರಮಾನಾಥರೈ,<br>ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು | 23-1-2015<br>ಶುಕ್ರವಾರ<br>ಮಧ್ಯಾಹ್ನ<br>1-30 ಗಂಟೆಗೆ | ಕೊಠಡಿ ಸಂಖ್ಯೆ<br>305, ಮೂರನೇ ಮಹಡಿ,<br>ವಿಧಾನ ಸೌಧ,<br>ಬೆಂಗಳೂರು |
| 4 | ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಯುವ ಸಂಸತ್ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭ:<br>ಉದ್ಘಾಟನೆ:<br>ಶ್ರೀ ಡಿ.ಹೆಚ್. ಶಂಕರಮೂರ್ತಿ | 23-1-2015<br>ಶುಕ್ರವಾರ<br>ಮಧ್ಯಾಹ್ನ<br>2-30 ಗಂಟೆಗೆ | ಶ್ರೀ ಚನ್ನಬಸಪ್ಪ ಸಭಾಂಗಣ,<br>ಕರ್ನಾಟಕ ಸರ್ಕಾರದ ಸಚಿವಾಲಯ ಕ್ಲಬ್<br>ಕಬ್ಬನ್‌ಪಾರ್ಕ್<br>ಕೆ.ಆರ್. ವೃತ್ತ, |

| | | | |
|---|---|---|---|
| | ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು<br><br>ಮುಖ್ಯ ಅತಿಥಿಗಳು:<br><br>ಶ್ರೀ ಟಿ.ಬಿ. ಜಯಚಂದ್ರ,<br>ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು<br>ಶ್ರೀ ಕಿಮ್ಮನೆ ರತ್ನಾಕರ<br>ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು<br><br>ಅಧ್ಯಕ್ಷತೆ:<br><br>ಶ್ರೀ ಕಾಗೋಡು ತಿಮ್ಮಪ್ಪ,<br>ಸಭಾಧ್ಯಕ್ಷರು,<br>ಕರ್ನಾಟಕ ವಿಧಾನ ಸಭೆ | | ಬೆಂಗಳೂರು |

ನಿರ್ದೇಶಕರ ಪರವಾಗಿ

## ಮಾಧ್ಯಮದವರ ಗಮನಕ್ಕೆ

ಜನವರಿ 26 ರ ಗಣರಾಜ್ಯೋತ್ಸವದ ಅಂಗವಾಗಿ ರಾಜ್ಯಪಾಲರು ರಾಜಭವನದಲ್ಲಿ ಸಂಜೆ 5.00 ಗಂಟೆಗೆ ಏರ್ಪಡಿಸಿರುವ ಚಹಾ ಕೂಟದ ವರದಿಗಾಗಿ ಆಗಮಿಸುವ ಮಾನ್ಯತೆ ಪಡೆದ ಮಾಧ್ಯಮ ಪ್ರತಿನಿಧಿಗಳು **ಜನವರಿ 20 ರಿಂದ ಜನವರಿ 24** ರವರೆಗೆ ಕಛೇರಿ ವೇಳೆಯಲ್ಲಿ ಸುದ್ದಿ ಮತ್ತು ಪತ್ರಿಕಾ ಶಾಖೆಯಿಂದ ಆಹ್ವಾನ ಪತ್ರಿಕೆಯನ್ನು ಪಡೆದುಕೊಳ್ಳಬಹುದಾಗಿದೆ.

## ಮಾಧ್ಯಮದವರ ಗಮನಕ್ಕೆ

ಫೆಬ್ರವರಿ 2 ರಿಂದ 13 ರವರೆಗೆ ನಡೆಯಲಿರುವ 14 ನೇ ವಿಧಾನ ಸಭೆಯ ಆರನೇ ಅಧಿವೇನದ ಕಲಾಪಗಳನ್ನು ವರದಿ ಮಾಡಲು ಮಾಧ್ಯಮ ಪ್ರತಿನಿಧಿಗಳಿಗೆ ಸ್ಮಾರ್ಟ್‌ಕಾರ್ಡ್ ಮಾದರಿಯಲ್ಲಿ ಪತ್ರಕರ್ತರ ವೇದಿಕೆ ಪಾಸುಗಳನ್ನು ಸಚಿವಾಲಯದಿಂದ ವಿತರಿಸಲು ತೀರ್ಮಾನಿಸಲಾಗಿದೆ.

ಈ ಸಂಬಂಧ ಶಾಸನ ಸಭೆಯ ನಡವಳಿಗಳನ್ನು ವರದಿ ಮಾಡುವ ಬೆಂಗಳೂರು ಆವೃತ್ತಿಯ ಪ್ರಮುಖ ದಿನ ಪತ್ರಿಕೆಗಳ ಹಾಗೂ ಪ್ರಮುಖ ಸುದ್ದಿ ವಾಹಿನಿಗಳ ***ಕನಿಷ್ಠ ಮೂವರು ವರದಿಗಾರರಿಗೆ ಮಾತ್ರ*** ಪತ್ರಕರ್ತರ ವೇದಿಕೆ ಪಾಸ್‌ಗಳನ್ನು ನೀಡಲಾಗುವುದು. ಪತ್ರಿಕಾ ಛಾಯಾಗ್ರಾಹಕರು ಮತ್ತು ಕ್ಯಾಮರಾಮನ್‌ಗಳಿಗೆ ಹಿಂದಿನ ರೀತಿಯಲ್ಲಿಯೇ ಪಾಸ್‌ನ್ನು ವಿತರಿಸಲಾಗುವುದು. ಆದ್ದರಿಂದ ಮಾಧ್ಯಮ ಸಂಸ್ಥೆಯ ಸುದ್ದಿ ಮುಖ್ಯಸ್ಥರ ಶಿಫಾರಸ್ಸು ಪತ್ರದೊಂದಿಗೆ ಪಾಸ್‌ಪೋರ್ಟ್ ಅಳತೆಯ 2 ಫೋಟೋಗಳನ್ನು ***ಜನವರಿ 23 ರೊಳಗಾಗಿ*** ಸುದ್ದಿ ಮತ್ತು ಪತ್ರಿಕಾ ಶಾಖೆಗೆ ಸಲ್ಲಿಸಲು ಸೂಚಿಸಿದೆ.

## ಪತ್ರಿಕಾ ಪ್ರಕಟಣೆ

### ವಾರ್ತಾ ಇಲಾಖೆಯಲ್ಲಿ ಜ. 24 ರಿಂದ
### ವೃತ್ತಿ ಹಾಗೂ ನಿರೂಪಣಾ ಕೌಶಲ್ಯ ತರಬೇತಿ

**ಬೆಂಗಳೂರು, ಜನವರಿ 22 (ಕರ್ನಾಟಕ ವಾರ್ತೆ)**

ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆಯು 2014-15 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಪದವೀಧರರಿಗೆ ಜನವರಿ 24 ರಿಂದ 30 ರವರೆಗೆ ವೃತ್ತಿ ಹಾಗೂ ನಿರೂಪಣಾ ಕೌಶಲ್ಯ ತರಬೇತಿ ನಡೆಸಲಿದೆ.

ಆಯ್ಕೆಯಾದ ಅಭ್ಯರ್ಥಿಗಳಿಗೆ ಈಗಾಗಲೇ ಪತ್ರ ಮುಖೇನ ತರಬೇತಿಗೆ ಹಾಜರಾಗಲು ತಿಳಿಸಲಾಗಿದ್ದು, ಪಟ್ಟಿಯನ್ನು ಇಲಾಖೆಯ ಅಂತರ್ಜಾಲ **www.karnatakavarthe.org/downloads ನಲ್ಲಿ ಪ್ರಕಟಿಸಲಾಗಿದೆ. ಪತ್ರ ತಲುಪದೇ ಇರುವ ಅಭ್ಯರ್ಥಿಗಳು ಈ ಪಟ್ಟಿಯನ್ನು ನೋಡಿಕೊಳ್ಳತಕ್ಕದ್ದು. ಈ ಪಟ್ಟಿಯಲ್ಲಿ ಇರುವ ಅಭ್ಯರ್ಥಿಗಳು ತರಬೇತಿಗೆ ಹಾಜರಾಗಲು ಕೋರಿದೆ.**

ಈ ತರಬೇತಿ ಕಾರ್ಯಕ್ರಮವು ದಿನಾಂಕ 24-1-2015 ರಿಂದ 30-1-2015 ರವರೆಗೆ ಸುಲೋಚನ ಸಭಾಂಗಣ, ವಾರ್ತಾ ಸೌಧ, ನಂ. 17, ಭಗವಾನ್ ಮಹಾವೀರ್ ರಸ್ತೆ, (ಇನ್‌ಫೆಂಟ್ರಿ ರಸ್ತೆ) ಬೆಂಗಳೂರು ಇಲ್ಲಿ ನಡೆಸಲಾಗುವುದು. ತರಬೇತಿಯ ಪ್ರಾರಂಭದಲ್ಲಿ ಅಭ್ಯರ್ಥಿಗಳಿಗೆ ತರಬೇತಿ ಸಾಮಗ್ರಿಯ ಕಿಟ್ ನೀಡಲಾಗುವುದು. ತರಬೇತಿ ಸಂದರ್ಭದಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಇಲಾಖೆಯಿಂದ ಮಾಡಲಾಗುವುದು. ತರಬೇತಿ ಪೂರ್ಣಗೊಳಿಸಿದವರಿಗೆ ರೂ. 10,000 (ಹತ್ತು ಸಾವಿರ ರೂಪಾಯಿಗಳು ಮಾತ್ರ) ಗಳ ಸ್ಟೈಫಂಡ್ ಹಾಗೂ ತರಬೇತಿ ಪ್ರಮಾಣ ಪತ್ರ ನೀಡಲಾಗುವುದು.

ತರಬೇತಿಗೆ ಮುನ್ನ ಅಂದರೆ, ದಿನಾಂಕ 24-1-2015 ರಂದು ಬೆಳಿಗ್ಗೆ 8-30 ಗಂಟೆಗೆ ಅಭ್ಯರ್ಥಿಯು ತನ್ನ 10 ನೇ ತರಗತಿ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ ಹಾಗೂ ಪದವಿ ಹಾಗೂ ಸ್ನಾತಕೋತ್ತರ ಅಂಕಪಟ್ಟಿಗಳ ಮೂಲ ದಾಖಲೆಗಳ ಪರಿಶೀಲನೆಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಚೇರಿಯಲ್ಲಿ ಹಾಜರಿರಬೇಕು. ಪರಿಶೀಲನೆ ಸಮಯದಲ್ಲಿ ಮೂಲ ದಾಖಲೆಗಳು ತಾಳೆಯಾಗದಿದ್ದಲ್ಲಿ ಅಭ್ಯರ್ಥಿಯು ತರಬೇತಿಗೆ ಅರ್ಹರಿರುವುದಿಲ್ಲ.

ಅಭ್ಯರ್ಥಿಗಳು ವಸತಿ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕ್ಕದ್ದು.

ಪಹೊ/ಬಾಬು/ಕೆಎಂ

## ಶಾಲೆಗೆ ದಾಖಲಾತಿ

**ಬೆಂಗಳೂರು, ಜ. 22 (ಕನಾ□ಟಕ ವಾತೆ□) :**

2015-16 ನೆ ಸಾಲಿಗೆ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ನಿಯಮದಂತೆ ಶೇ. 25 ರ ಪ್ರಮಾಣದಲ್ಲಿ ಅನುದಾನ ರಹಿತ ಶಾಲೆಗಳಲ್ಲಿ ಒಂದನೇ ತರಗತಿಗೆ ದಾಖಲಾತಿ ಮಾಡಿಕೊಳ್ಳಲು ಶಾಲೆಗಳ ಪಟ್ಟಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಬೆಂಗಳೂರು ದಕ್ಷಿಣ ವಲಯ-3 ರಲ್ಲಿ, ಜಿಲ್ಲಾಧಿಕಾರಿಗಳ ಕಚೇರಿ, ಜಿಲ್ಲಾ ಪಂಚಾಯತ್ ಕಚೇರಿ, ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರ ಕಚೇರಿಗಳಲ್ಲಿ ಪ್ರಕಟಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು ಅಂತರ್ಜಾಲ www.schooleducation.kar.nic.in ರಲ್ಲಿ ಪ್ರಕಟಿಸಲಾಗಿದೆ.

ಬಾಬು/ಕೆಎಂ

## ರಾಷ್ಟ್ರೀಯ ಮತದಾರರ ದಿನಾಚರಣೆ

**ಬೆಂಗಳೂರು, ಜ. 22 (ಕನಾ□ಟಕ ವಾತೆ□) :**

ಭಾರತ ಚುನಾವಣಾ ಆಯೋಗವು ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಜನವರಿ 25 ರಂದು ಬೆಂಗಳೂರು ಅರಮನೆ ರಸ್ತೆಯಲ್ಲಿರುವ ಸೆಂಟ್ರಲ್ ಕಾಲೇಜು ಆವರಣದಲ್ಲಿ ಮಧ್ಯಾಹ್ನ 12-30 ಗಂಟೆಗೆ ಏರ್ಪಡಿಸಿದೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯಪಾಲ ಶ್ರೀ ವಾಜುಭಾಯಿ ರೂಢಭಾಯಿ ವಾಲಾ ಅವರು ಆಗಮಿಸುವರು. ರಾಜ್ಯ ಚುನಾವಣಾ ಆಯೋಗದ ಆಯುಕ್ತ ಶ್ರೀ ಪಿ.ಎನ್. ಶ್ರೀನಿವಾಸಾಚಾರಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶ್ರೀ ಕೌಶಿಕ್ ಮುಖರ್ಜಿ ಪಾಲ್ಗೊಳ್ಳುವರು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಶ್ರೀ ಅನಿಲ್ ಕುಮಾರ್ ಝಾ ಅವರು ತಿಳಿಸಿದಾಬಾಬು/ಕೆಎಂ

ಬಾಬು/ಕೆಎಂ

## ಲೋಕಾಯುಕ್ತರ ಪ್ರವಾಸ

**ಬೆಂಗಳೂರು, ಜ. 22 (ಕನಾ□ಟಕ ವಾತೆ□) :**

ಕರ್ನಾಟಕ ರಾಜ್ಯ ಲೋಕಾಯುಕ್ತ ನ್ಯಾಯಮೂರ್ತಿ ಡಾ: ವೈ ಭಾಸ್ಕರರಾವ್ ಅವರು ಫೆಬ್ರವರಿ 5 ರಂದು ಯಾದಗಿರಿ, ಫೆಬ್ರವರಿ 6 ರಂದು ಕೊಪ್ಪಳ ಮತ್ತು ಫೆಬ್ರವರಿ 7 ರಂದು ರಾಯಚೂರು ಜಿಲ್ಲೆಗಳಲ್ಲಿ

ಪ್ರವಾಸ ಮಾಡುವರು. ತಮ್ಮ ಪ್ರವಾಸದ ಅವಧಿಯಲ್ಲಿ ಆಯಾ ಜಿಲ್ಲೆಗಳಲ್ಲಿ ಬಾಕಿ ಪ್ರಕರಣಗಳ ವಿಚಾರಣೆ ನಡೆಸುವರು ಎಂದು ಲೋಕಾಯುಕ್ತ ಕಚೇರಿ ಪ್ರಕಟಣೆ ತಿಳಿಸಿದೆ.
ಬಾಬು/ಕೆಎಂ

## ಸಾರಿಗೆ ಅದಾಲತ್

**ಬೆಂಗಳೂರು, ಜ. 22 (ಕನಾ□ಟಕ ವಾತೆ□) :**

ಬೆಂಗಳೂರು ಯಶವಂತಪುರದಲ್ಲಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಜನವರಿ 28 ರಂದು ಮಧ್ಯಾಹ್ನ 3-00 ಗಂಟೆಗೆ "ಸಾರಿಗೆ ಅದಾಲತ್" ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಯಶವಂತಪುರ ಬಿ.ಬಿ.ಎಂ.ಪಿ. ವಾಣಿಜ್ಯ ಸಂಕೀರ್ಣದಲ್ಲಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಗೆ ಸಂಬಂಧಿಸಿದ ಕುಂದು ಕೊರತೆಗಳನ್ನು ಸ್ವೀಕರಿಸಿ ಪರಿಹಾರ ಸ್ವೀಕರಿಸಲಾಗುವುದೆಂದು ಪ್ರಕಟಣೆ ತಿಳಿಸಿದೆ.
ಬಾಬು/ಕೆಎಂ

## ವಿಧಾನ ಪರಿಷತ್ ಅಧಿವೇಶನ

**ಬೆಂಗಳೂರು, ಜನವರಿ 22 (ಕರ್ನಾಟಕ ವಾರ್ತೆ)**

**ಕರ್ನಾಟಕ ವಿಧಾನ ಪರಿಷತ್ ಅಧಿವೇಶನವು 2015 ರ ಫೆಬ್ರವರಿ 2 ರ ಸೋಮವಾರ ಮಧ್ಯಾಹ್ನ 12-00 ಗಂಟೆಗೆ ಬೆಂಗಳೂರಿನ ವಿಧಾನ ಸೌಧಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲ ಸಮಾವೇಶಗೊಳ್ಳಲಿದೆ. ಅಂದು ಮಧ್ಯಾಹ್ನ 12-00 ಗಂಟೆಗೆ ರಾಜ್ಯಪಾಲರು ಜಂಟಿ ಅಧಿವೇಶನವನ್ನುದ್ದೇಶಿಸಿ ಮಾತನಾಡುವರು. ರಾಜ್ಯಪಾಲರ ಭಾಷಣ ಮುಗಿದ ಕೂಡಲೇ ವಿಧಾನ ಪರಿಷತ್ತಿನ ಸಭಾಂಣಗದಲ್ಲಿ ಮತ್ತೆ ಸಭೆ ಸೇರಲಿದೆ.**

**ಫೆಬ್ರವರಿ 3 ರಿಂದ 13 ರವರೆಗೆ ಸರ್ಕಾರಿ ಮತ್ತು ಖಾಸಗಿ ಕಾರ್ಯಕಲಾಪಗಳು ನಡೆಯಲಿದ್ದು ಫೆಬ್ರವರಿ 7 ರಂದು ಶನಿವಾರ ಕಾರ್ಯಕಲಾಪಗಳು ಇರುವುದಿಲ್ಲ. ಫೆಬ್ರವರಿ 8 ರಂದು ಭಾನುವಾರ ಸಾರ್ವತ್ರಿಕ ರಜೆ ಇರುತ್ತದೆ ಎಂದು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯದರ್ಶಿ ಶ್ರೀ ವಿ. ಶ್ರೀಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**
**ಬಾಬು/ಕೆಎಂ**

## ರಾಷ್ಟ್ರೀಯ ಸೇವಾ ಯೋಜನೆ: ಸ್ವಚ್ಛತಾ ಅಭಿಯಾನ

**ಬೆಂಗಳೂರು, ಜನವರಿ 22 (ಕರ್ನಾಟಕ ವಾರ್ತೆ)**

**ರಾಷ್ಟ್ರೀಯ ಸೇವಾ ಯೋಜನೆ ಸ್ವಚ್ಚತಾ ಅಭಿಯಾನ ಮತ್ತು ಪ್ಲಾಸ್ಟಿಕ್ ಬಳಕೆ ನಿಯಂತ್ರಣಕ್ಕಾಗಿ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಹೆಚ್.ಯು. ತಳವಾರ್ ಅವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಸೇವಾ ಯೋಜನೆ ರಾಜ್ಯ ಸಂಪರ್ಕಾಧಿಕಾರಿಗಳಾದ ಡಾ: ಗಣನಾಥ ಶೆಟ್ಟಿ ಹಾಗೂ ನಿರ್ದೇಶನಾಲಯದ ಎಲ್ಲಾ ಜಂಟಿ ನಿರ್ದೇಶಕರು, ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದವರ ಸಮ್ಮುಖದಲ್ಲಿ ಸ್ವಚ್ಚತಾ ಅಭಿಯಾನ ಮತ್ತು**

**ಪ್ಲಾಸ್ಟಿಕ್ ಬಳಕೆ ನಿಯಂತ್ರಣಕ್ಕಾಗಿ ಅರಿವಿನ ಕಾರ್ಯಕ್ರಮಗಳನ್ನು ಜಾರಿಗೆ ತರುವ ಬಗ್ಗೆ ಹಾಗೂ ಸ್ವಾಮೀ ವಿವೇಕಾನಮದರ ಜನ್ಮದಿನಾಚರಣೆಯ ಅಂಗವಾಗಿ ಯುವ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.**
ಬಾಬು/ಕೆಎಂ

**ಛಾಯಾಚಿತ್ರ ಶೀರ್ಷಿಕೆ:1000**

**ರಾಷ್ಟ್ರೀಯ ಸೇವಾ ಯೋಜನೆ ಸ್ವಚ್ಚತಾ ಅಭಿಯಾನ ಮತ್ತು ಪ್ಲಾಸ್ಟಿಕ್ ಬಳಕೆ ನಿಯಂತ್ರಣಕ್ಕಾಗಿ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಹೆಚ್.ಯು. ತಳವಾರ್ ಅವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಸೇವಾ ಯೋಜನೆ ರಾಜ್ಯ ಸಂಪರ್ಕಾಧಿಕಾರಿಗಳಾದ ಡಾ: ಗಣನಾಥ ಶೆಟ್ಟಿ ಹಾಗೂ ನಿರ್ದೇಶನಾಲಯದ ಎಲ್ಲಾ ಜಂಟಿ ನಿರ್ದೇಶಕರು, ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದವರ ಸಮ್ಮುಖದಲ್ಲಿ ಸ್ವಚ್ಚತಾ ಅಭಿಯಾನ ಕೈಗೊಳ್ಳಲಾಯಿತು.**
ಬಾಬು/ಕೆಎಂ

## ಸಂಸತ್ ಕಲಾಪದ ಅರಿವು ವಿದ್ಯಾರ್ಥಿಗಳಿಗೆ ಅಗತ್ಯ

ಬೆಂಗಳೂರು ಜನವರಿ 22 (ಕರ್ನಾಟಕ ವಾರ್ತೆ)-

ವಿದ್ಯಾರ್ಥಿ ಸಮುದಾಯದಲ್ಲಿ ಸಂಸತ್ ಕಾರ್ಯಕಲಾಪದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ರಾಜ್ಯಮಟ್ಟದ ಯುವ ಸಂಸತ್ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಶ್ರೀ ಕಿಮ್ಮನೆ ರತ್ನಾಕರ ತಿಳಿಸಿದರು.

ಅವರು ಇಂದು ಕರ್ನಾಟಕ ಸರ್ಕಾರ ಸಚಿವಾಲಯ ಕ್ಲಬ್‌ನ ಶ್ರೀ ಚನ್ನಬಸಪ್ಪ ಸಭಾಂಗಣದಲ್ಲಿ ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆವತಿಯಿಂದ 2014-15ನೇ ಸಾಲಿನ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಯ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡುತ್ತ ಸಂಸತ್ ಕಲಾಪದ ಸಮಯದಲ್ಲಿ ಶಿಸ್ತು ಸಂಯಮವನ್ನು ಪಾಲಿಸುತ್ತೇವೆ. ಸಂಬಂಧಿಸಿದ ವಿಷಯಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿದುಕೊಂಡು ಕಲಾಪದಲ್ಲಿ ಮಾತನಾಡುತ್ತೇವೆ ಎಂದು ಹೇಳಿದರು.

ದೇಶಕ್ಕಾಗಿ ಹೋರಾಡಿದ ಗಣ್ಯವ್ಯಕ್ತಿಗಳ ಹಾಗು ಉತ್ತಮ ಆಡಳಿತ ನೀಡಿದಂತ ರಾಜಕಾರಣಿಗಳ ಪುಸ್ತಕಗಳನ್ನು ಓದುವ ಅಭ್ಯಾಸವನ್ನು ಮಕ್ಕಳು ಬೆಳೆಸಿಕೊಳ್ಳಬೇಕು, ಇದರಿಂದ ನೀವು ಕೂಡ ದೇಶದ ಉತ್ತಮ ಪ್ರಜೆಗಳಾಗಲು ಸಾಧ್ಯ ಎಂದು ಸಲಹೆ ನೀಡಿದರು.

ಮಕ್ಕಳಲ್ಲಿ ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡುವ ಹಾಗೂ ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಜವಾಬ್ದಾರಿ ಶಿಕ್ಷಕರ ಮೇಲೆ ಇದೆ ಎಂದರು.

ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ *ರಾಜ್ಯಾದ್ಯಾಂತ* ವಿವಿಧ ಶಾಲೆಗಳಿಂದ ಸುಮಾರು 70 ವಿದ್ಯಾರ್ಥಿಗಳು ಭಾಗವಹಿಸಿದ್ದರು.
/ಬಾಬು/ಎನ್‌ಎಸ್/ಕೆಎಂ